ಅಧ್ಯಕ್ಷರು: ಪ್ರಸ್ತಾವ ಏನೆಂದರೆ, "2007ರ ಕರ್ನಾಟಕ ತೋಟಗಾರಿಕಾ ವಿಶ್ವವಿದ್ಯಾನಿಲಯ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಶಶಿಕಾಂತ ಅಕ್ಕಪ್ಪ ನಾಯಿಕ (ತೋಟಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, 2007ರ ಕರ್ನಾಟಕ ತೋಟಗಾರಿಕಾ ವಿಶ್ವವಿದ್ಯಾನಿಲಯ ವಿಧೇಯಕವನ್ನು ಸಭೆ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು:– ವಿಧೇಯಕವನ್ನು ಮಂಡಿಸಲಾಗಿದೆ.

ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ತೋಟಗಾರಿಕಾ ವಿಶ್ವವಿದ್ಯಾನಿಲಯದ ವಿಧೇಯಕ, 2007 ಪರ್ಯಾಲೋಚನೆ ಪ್ರಸ್ತಾವ

ಶ್ರೀ ಶಶಿಕಾಂತ ಅಕ್ಕಪ್ಪ ನಾಯಿಕ (ತೋಟಗಾರಿಕಾ ಸಚಿವರು): ಮಾನ್ಯ ಅಧ್ಯಕ್ಷರೆ, 2007ರ ಕರ್ನಾಟಕ ತೋಟಗಾರಿಕಾ ವಿಶ್ವವಿದ್ಯಾನಿಲಯ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಶ್ರೀ ಶಶಿಕಾಂತ ಅಕ್ಕಪ್ಪ ನಾಯಿಕ: ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯವು ತೋಟಗಾರಿಕೆಯಲ್ಲಿ ಮುಂಚೂಣಿಯಲ್ಲಿದ್ದು, ಗ್ರಾಮೀಣಾಭಿವೃದ್ಧಿಯಲ್ಲಿ ಸಕ್ರಿಯ ಪಾತ್ರ ವಹಿಸಿದೆ. ರಾಜ್ಯದಲ್ಲಿ ಸುಮಾರು 16.3 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಯನ್ನು ಬೆಳೆಯಲಾಗುತ್ತಿದ್ದು, ವಾರ್ಷಿಕ 95.81 ಲಕ್ಷ ಟನ್‌ಗಳಷ್ಟು ಉತ್ಪಾದನೆಯಾಗುತ್ತಿದೆ. ತೋಟಗಾರಿಕೆ ಪ್ರದೇಶದ ಒಟ್ಟು ಸಾಗುವಳಿ ಪ್ರದೇಶದ ಶೇಕಡ 14.4ರಷ್ಟಿದ್ದು, ತೋಟಗಾರಿಕಾ ಉತ್ಪನ್ನಗಳ ಮೌಲ್ಯ 9,000 ಕೋಟಿ ರೂಪಾಯಿಗಳಿಗೆ ಒಳಪಡುತ್ತದೆ. ಕೃಷಿ ವಲಯದ ಆಧಾರದಲ್ಲಿ ಶೇಕಡ 40ರಷ್ಟು ಆದಾಯ ತೋಟಗಾರಿಕಾ ಉತ್ಪನ್ನಗಳಿಂದಲೇ ಬರುತ್ತಿದೆ. ತೋಟಗಾರಿಕಾ ಬೆಳೆಗಳ ಉತ್ಪನ್ನಗಳನ್ನು ರಫ್ತು ಮಾಡಲು ವಿಫುಲ ಅವಕಾಶಗಳಿವೆ. ಕೃಷಿ ವಲಯದಿಂದ 2005–06ರಲ್ಲಿ ಸುಮಾರು 2,529 ಕೋಟಿಗಳಷ್ಟು ಮತ್ತು 2006–07ರಲ್ಲಿ 2,655 ಕೋಟಿ

ಮೌಲ್ಯದ ಉತ್ಪನ್ನಗಳನ್ನು ರಫ್ತು ಮಾಡಲಾಗುತ್ತಿದೆ. ರಫ್ತಿನ ಪ್ರಮಾಣವನ್ನು ಅನೇಕ ಪಟ್ಟು ಹೆಚ್ಚಿಸಲು ಸಹ ಅವಕಾಶ ಇದೆ. ಕರ್ನಾಟಕ ರಾಜ್ಯವು ವೈವಿಧ್ಯಮಯ ಹವಾಗುಣ ಹೊಂದಿದ್ದು, ವಿವಿಧ ರೀತಿಯ ತೋಟಗಾರಿಕಾ ಬೆಳೆಗಳನ್ನು ಬೆಳೆಯಲು ಪೂರಕವಾಗಿದೆ. ಪ್ರಸ್ತುತ, ಕೃಷಿ ವಿಶ್ವವಿದ್ಯಾನಿಲಯದಲ್ಲಿ ತೋಟಗಾರಿಕೆಯನ್ನು ಒಂದು ವಿಷಯವಾಗಿ ಅಭ್ಯಸಿಸುತ್ತಿದ್ದು, ತೋಟಗಾರಿಕೆ ಬೆಳೆಗಳಿಗೆ ಸಂಬಂಧಿಸಿದಂತೆ ಹೆಚ್ಚು ಒತ್ತು ನೀಡಲು ಹಾಗೂ ತೋಟಗಾರಿಕೆ ಬೆಳೆಗಳಿಗೆ ತಗುಲುವ ಕೀಟ ಮತ್ತು ರೋಗಗಳ ಹತೋಟಿ ಕುರಿತು ಹೆಚ್ಚಿನ ಸಂಶೋಧನೆ ನಡೆಸಲು ಪ್ರತ್ಯೇಕ ವಿಶ್ವವಿದ್ಯಾನಿಲಯದ ಅವಶ್ಯಕತೆ ಇದೆ. ಹಾಲಿ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಕೃಷಿ ಬೆಳೆಗಳ ಬಗ್ಗೆ ಹೆಚ್ಚಿನ ಸಂಶೋಧನೆ ನಡೆಸುತ್ತಿದ್ದು, ತೋಟಗಾರಿಕೆ ಸಮಸ್ಯೆ ಉಲ್ಬಣವಾಗಿರುವುದು ಇದರ ಬಗ್ಗೆ ನಿಖರವಾದ ಕೇಂದ್ರೀಕೃತ ಸಂಶೋಧನೆಯ ಅವಶ್ಯಕತೆ ಇದೆ. ಇತ್ತೀಚಿನ ದಿನಗಳಲ್ಲಿ ಹೊಸ ತಳಿಗಳ ಪರಿಚಯ, ಹೊಸ ತಂತ್ರಜ್ಞಾನ ಪರಿಚಯ ಹಾಗೂ ರಫ್ತು ಗುಣಗಳ ತೋಟಗಾರಿಕೆ ಉತ್ಪನ್ನಗಳನ್ನು ಆಧುನಿಕ ತಂತ್ರಜ್ಞಾನ ಬಳಸಿ ಬೆಳೆಯಲು ರೈತರು ಹೆಚ್ಚಿನ ಒಲವು ತೋರಿಸಿದ್ದಾರೆ. ಬೆಳೆ ಹಾಗೂ ಉತ್ಪಾದನೆ ಹೆಚ್ಚಿಸಲು, ಗುಣಮಟ್ಟ ಕಾಪಾಡಲು ಕೊಯ್ಲೋತ್ತರ ನಿರ್ವಹಣೆ ಹಾಗೂ ಸಂಸ್ಕರಣೆಗೆ ಒತ್ತು ನೀಡುವುದು ಇಂದು ಅನಿವಾರ್ಯವಾಗಿದೆ.

ಶ್ರೀ ಡಿ.ಕೆ.ಶಿವಕುಮಾರ್: ಅಧ್ಯಕ್ಷರೆ, ಇದು ಹೊಸ ಬಿಲ್. ಈಗ ಹೊಸ ಬಿಲ್ ಕೊಡುತ್ತಿದ್ದಾರೆ. ಒಂದು ಅಥಾರಿಟಿ ಇರಬೇಕು. ತೋಟಗಾರಿಕೆ ವಿಶ್ವವಿದ್ಯಾನಿಲಯವನ್ನು ಹೊಸದಾಗಿ ಸ್ಥಾಪಿಸುವುದರಿಂದ ರಾಜ್ಯದ ರೈತರನ್ನು Agriculture & Horticulture ಎಂದು ಎರಡು ಭಾಗಗಳನ್ನಾಗಿ ಮಾಡಲು ಹೊರಟಂತಿದೆ. ಸುಮ್ಮನೆ ಏಕಾಏಕಿ ಈ ರೀತಿ ಬಿಲ್ ತಂದು, ಒಂದು ಪೇಜಿನಲ್ಲಿ ಓದಿ ಬಿಟ್ಟರೆ, ಆಗುವುದಿಲ್ಲ. ಇದರ ಬಗ್ಗೆ ವ್ಯಾಪಕವಾಗಿ ಚರ್ಚೆಯಾಗಬೇಕು. ಈ ಯೂನಿವರ್ಸಿಟಿಯ ಅವಶ್ಯಕತೆ ಇದೆಯೇ? ಇಲ್ಲವೇ? ಒಂದು ಕಡೆ Veterinary University, ಒಂದು ಕಡೆ Floriculture University, ಒಂದು ಕಡೆ Horticulture University, ಬೇಕಾದಷ್ಟು ವಿವಿಧ ರೀತಿಯಲ್ಲಿ ವ್ಯಾಖ್ಯಾನಗಳಾಗುತ್ತವೆ. ನಾವು Women University ಮಾಡಿದ್ದಾಯಿತು, Medical University ಮಾಡಿ, ಅದನ್ನು ಎತ್ತಿಕೊಂಡು ಹೋಗಿ ರಾಮನಗರಕ್ಕೆ ಹಾಕಿದ್ದಾಯಿತು. ಬೆಳಗಾಂನಲ್ಲಿ Technical

University ಮಾಡಿದ್ದಾಯಿತು. ಹೀಗೆ ಬೇಕಾದಷ್ಟು ರೀತಿಯಲ್ಲಿ ನಮ್ಮ education system ಹರಡುತ್ತಿದ್ದೇವೆ. ಆದರೂ ಇದರಿಂದ ಏನೂ ಪ್ರಯೋಜನವಾಗುತ್ತಿಲ್ಲ. ಆದುದರಿಂದ, ನಿಮ್ಮ ಉದ್ದೇಶ ಏನೆಂಬುದರ ಬಗ್ಗೆ ನೀವು ನೇರವಾಗಿ ಒಂದು conclusionಗೆ ಬನ್ನಿ. officers ಬರೆದುಕೊಟ್ಟದ್ದನ್ನು ನೀವು ಓದುವಂತಿದ್ದರೆ, ಈ ಪುಸ್ತಕವನ್ನು ಐದು ನಿಮಿಷದಲ್ಲಿ ಇಲ್ಲಿರುವ ನಾವ್ಯಾರೂ ಪಾಸ್ ಮಾಡುವುದಕ್ಕೆ ತಯಾರಿಲ್ಲ ಸ್ವಾಮಿ. ಅದನ್ನು ತಾವು clear ಆಗಿ ಹೇಳಬೇಕು. what is your vision? why you wanted it? ಇದರಿಂದ ಏನು ಅನುಕೂಲವಾಗುತ್ತದೆ? ಮೊದಲು ಇದನ್ನು ಕ್ಲಿಯರ್ ಆಗಿ ಹೇಳಿ. ಅನಂತರ, ಉಳಿದ ಮಾತು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗ ಬಿಲ್ ಕೊಡುತ್ತಿದ್ದಾರೆ. ಈಗ introduce ಮಾಡಿದ್ದಾರೆ. ಇದು ಸುಮಾರು 60 ಪುಟಗಳಷ್ಟಿದೆ. 60 ಪುಟಗಳಷ್ಟಿರುವ ಬಿಲ್ ಅನ್ನು ನೀವು ಈಗ ಇಲ್ಲಿಟ್ಟು ಬಿಲ್ ಪಾಸ್ ಮಾಡಿ ಎಂದರೆ, ಖಂಡಿತವಾಗಿಯೂ ಸಾಧ್ಯವಿಲ್ಲ. ಇದಕ್ಕೆ ಸಮಯ ಬೇಕಾಗುತ್ತದೆ, ಬಿಲ್ ಓದಬೇಕಾಗುತ್ತದೆ. ಎರಡನೆಯದು, ನಮ್ಮ ರಾಜ್ಯಕ್ಕೆ ತೋಟಗಾರಿಕಾ ವಿಶ್ವವಿದ್ಯಾನಿಲಯ ಬೇಕೆ, ಬೇಡವೇ ಎನ್ನತಕ್ಕಂಥ ಪ್ರಶ್ನೆಯೂ ಇದೆ. ಈಗ ನಾವು ಹೊಸ Act ಮಾಡುತ್ತಿದ್ದೇವೆ. ಹೊಸದಾಗಿ Act ಮಾಡುವಾಗ ಬಹಳ ವ್ಯಾಪಕವಾಗಿ ಚರ್ಚೆಯಾಗಬೇಕಾಗುತ್ತದೆ. ಏಕೆಂದರೆ, ಒಂದು ಕಾನೂನು ತರುವಾಗ ಹಲವಾರು ದೃಷ್ಟಿಕೋನಗಳಿಂದ ಇದರ ಬಗ್ಗೆ ನಾವು ನೋಡಬೇಕಾಗುತ್ತದೆ. ಸುಮ್ಮನೆ ಏಕಾಏಕಿ ಕಣ್ಮುಚ್ಚಿಕೊಂಡು ಇದಕ್ಕೆ ಒಪ್ಪಿಗೆ ಕೊಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು: ಆಯಿತು, for considerationಗೆ ಇದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಲ್ಲಲ್ಲ, ಇದು Joint Select Committee ಗೆ ಹೋಗಬೇಕು.

ಅಧ್ಯಕ್ಷರು: ಇದನ್ನು ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ. ನಾಳೆ ಬೆಳಿಗ್ಗೆ ಪಾಸ್ ಮಾಡಿಕೊಳ್ಳಬಹುದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಆಯಿತು, ನಾಳೆ ಚರ್ಚೆ ಮಾಡೋಣ ಬಿಡಿ.

ಅಧ್ಯಕ್ಷರು: .....ಅದಕ್ಕೋಸ್ಕರವೇ ಈಗ ಸಮಯ ಬೇಕೆಂದು ಹೇಳುತ್ತಿದ್ದಾರೆ. ಮಂತ್ರಿಗಳೆ, ನಾಳೆ ಬೆಳಿಗ್ಗೆ ತೆಗೆದುಕೊಳ್ಳೋಣ. ಶಿವಕುಮಾರ್‌ರವರೆ, ಅವರನ್ನು ಹೆದರಿಸಬೇಡಿ. ಅವರು ಹೊಸಬರು. ಇದನ್ನು ನಾಳೆ ಚರ್ಚೆಗೆ ತೆಗೆದುಕೊಳ್ಳೋಣ. ಅವರೂ ಅಭ್ಯಾಸ ಮಾಡಿಕೊಂಡು ಬರುತ್ತಾರೆ. ನೀವೂ ಸ್ವಲ್ಪ ಅದರ ಬಗ್ಗೆ ನೋಡಿ, ಯಾವ ಕಾರಣಕ್ಕೋಸ್ಕರ ವಿಶ್ವವಿದ್ಯಾನಿಲಯದ ಅಗತ್ಯತೆ ಇದೆ ಎನ್ನುವುದನ್ನು ನೀವೂ ಮನದಟ್ಟು ಮಾಡಿಕೊಡಬೇಕು. ಇದನ್ನು ಬೆಳಿಗ್ಗೆ ತೆಗೆದುಕೊಳ್ಳೋಣ.

3. ಹಕ್ಕುಚ್ಯುತಿ ಮಂಡನೆಗೆ ಅನುಮತಿ ಕೋರಿಕೆ.

ವಿಷಯ: "ಅಕ್ಷರ ದಾಸೋಹ" ಕಾರ್ಯಕ್ರಮವನ್ನು ಖಾಸಗಿ ಏಜೆನ್ಸಿಗೆ ನೀಡಿರುವ ಬಗ್ಗೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೆ, ದಿನಾಂಕ 13.4.2007 ರಂದು ನಾನು ಈ ಸಭೆ ಮುಂದೆ 'ಅಕ್ಷರ ದಸೋಹ' ನಡೆಯುವ ಕಡೆ ಏನು ಖಾಸಗಿಯವರಿಗೆ ವಹಿಸಿಕೊಟ್ಟಿದ್ದೀರಿ, ಆ ಸಂಸ್ಥೆ ಸರ್ಕಾರ ಒಂದು ಏಜೆನ್ಸಿಯೆಂದು ಕೊಡುವ ಸಂಸ್ಥೆಯಲ್ಲ ಮತ್ತು ಸಾವಿರಾರು ಜನ ಹೆಣ್ಣು ಮಕ್ಕಳನ್ನು ಉದ್ಯೋಗರಹಿತರನ್ನಾಗಿ ಮಾಡಿದ್ದೀರೆಂದು ಈ ಸಭೆ ಮುಂದೆ ನಾನು ಬೇಕಾದಷ್ಟು ವಿಷಯಗಳನ್ನು ಮಾತನಾಡಿದ್ದೇನೆ. ಅದರ ಪ್ರಕಾರ ನಾವು ತನಿಖೆ ಮಾಡುತ್ತೇವೆಂದು ಅವತ್ತು ಸರ್ಕಾರ ಬಹಳ ಪೌರುಷವಾದ ಉತ್ತರ ಕೊಟ್ಟಿತು. ಕೊನೆಯಲ್ಲಿ ಮಿನಿಸ್ಟರ್ ಉತ್ತರ ಕೊಟ್ಟಿದ್ದು. "ಈ ವಿಚಾರದಲ್ಲಿ ಯಾವುದೇ ತರಹದ ಅನಮಾನ ಬೇಡ. ಸ್ಪಷ್ಟವಾದ ನಿಲುವಿಗೆ ಸರ್ಕಾರ ಬರುತ್ತದೆ. ತನಿಖೆ ಆರಂಭಿಸುವುದಕ್ಕೆ, ಯಾವ ರೀತಿಯ ತನಿಖೆ ಮಾಡಬೇಕೆನ್ನುವುದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ ಮತ್ತೆ ತತ್‌ಕ್ಷಣ ಏನು ಕ್ರಮಗಳನ್ನು ಕೈಗೊಳ್ಳಬೇಕೋ, ಅದರ ಬಗ್ಗೆ ನನಗೆ ಈಗಾಗಲೇ ಗೃಹ ಸಚಿವರು ಒಂದು ಪತ್ರ ಕಳುಹಿಸಿ, ನೀವು ಸ್ಪಷ್ಟವಾದ ಉತ್ತರ ಕೊಡಿ, ಅದರ ಬಗ್ಗೆ ನಾಳೆ ನಾವು–ನೀವು ಮುಖ್ಯಮಂತ್ರಿಗಳೊಂದಿಗೆ ಕುಳಿತು ಮಾತನಾಡಿ, ಸ್ಪಷ್ಟವಾದ ನಿಲುವನ್ನು ಸದಸ್ಯರಿಗೆ ಮತ್ತು ಪತ್ರಿಕೆಗಳಿಗೆ ತಿಳಿಸೋಣವೆಂದು ಅವರು ತಿಳಿಸಿದ್ದಾರೆ. ದಯಮಾಡಿ ಈ ಬಗ್ಗೆ